(೩) ಕೊಡಗು ಜಿಲ್ಲೆಯ ಜಮ್ಮ-ಜಮೀನುಗಳನ್ನು ಪರಾಧೀನ ಮಾಡದಂತೆ ತಡೆ ಆಜ್ಞೆ ನೀಡಿರುವುದು

† ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯಲ್ಲಿ ಜಮ್ಮ ಸಾಗು ಉಂಬಳಿ ಟೆನ್ಯೂರು ಮಂತಾದ ಜಮೀನುಗಳಿರುವುದು ಸರಿಯಷ್ಟೆ. ಈ ಬಗ್ಗೆ ಜಮ್ಮ ಜಮೀನು ಸರಕಾರದವರು ಅದರ ಅಭಿವೃದ್ಧಿಗೆ ತಡೆ ಹಿಡಿದಿದ್ದಾರೆ. ಅಲ್ಲದೆ ಈ ಜಮ್ಮ ಜಮೀನುಗಳನ್ನು ಪರಾಧೀನ ಮಾಡದಂತೆ ಸರಕಾರ ಆದೇಶ ಹೊರಡಿಸಿದೆ. ಈ ಬಗ್ಗೆ ಕರ್ನಾಟಕ ಸರಕಾರವು ಉಪ ಸಮಿತಿಯೊಂದನ್ನು ರಚಿಸಿ ಉಪ ಸಮಿತಿಯವರು ಅಂದರೆ ಮಾನ್ಯ ಕಂದಾಯ ಸಚಿವರು ದಿನಾಂಕ ೪-೧೨-೮೫ರಂದು ಮಾಡಕೇರಿಯಲ್ಲಿ ಕೊಡಗು ಜನತೆಯ ಪರವಾಗಿ ಆಹ್ವಾನಿಸಿದ್ದ ಜಿಲ್ಲೆಯ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಶಾಸಕರು ಮತ್ತು ಅಧಿಕಾರಿಗಳೊಂದಿಗೆ ದೀರ್ಘವಾಗಿ ಚರ್ಚಿಸಿರುತ್ತಾರೆ. ಅಲ್ಲದೆ ೧೯೮೬ರ ಜೂನ್ ತಿಂಗಳಲ್ಲಿ ಕಂದಾಯ ಆಯುಕ್ತರು ಮತ್ತು ಕಾನೂನು ಕಾರ್ಯದರ್ಶಿಗಳು ಜಿಲ್ಲೆಗೆ ಆಗಮಿಸಿ ಪುನಃ ಚರ್ಚೆ ನಡೆಸಿ ಹೋಗಿರುತ್ತಾರೆ. ಅದರೂ ಈ ಬಗ್ಗೆ ಯಾವುದೇ ತೀರ್ಮಾನಕ್ಕೆ ಬಂದಿರುವುದಿಲ್ಲ. ಇದರಿಂದ ಕೊಡಗು ಜಿಲ್ಲೆಯ ಜಮ್ಮ ಬಾಣೆಯ ವರ್ಗಾ ಹಿಡುವಳಿದಾರರಿಗೂ ಅಲ್ಲದೆ ಕಂದಾಯ ಇಲಾಖೆಯ ಅಧಿಕಾರಿಗಳಿಗೂ ಸಹ ವ್ಯವಹರಿಸುವಲ್ಲಿ ಬಹಳ ತೊಂದರೆಯಾಗುತ್ತಿರುವ ಕಾರಣ ಈ ಬಗ್ಗೆ ಕ್ರಮ ಕೈಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ಮಾನ್ಯ ಜಮೀನುಗಾರಿಕೆ ಮತ್ತು ಬಂದರು ಸಚಿವರು).—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಸಭೆಯಲ್ಲಿ ಇಲ್ಲ. ಆದ ಕಾರಣ ಮಾನ್ಯ ಮಂತ್ರಿಗಳಿಗೆ ನಾನು ಈ ವಿಷಯವನ್ನು ತಿಳಿಸಿ ಉತ್ತರವನ್ನು ಮಾನ್ಯ ಸದಸ್ಯರಿಗೆ ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ

(೪) ಉಡುಪಿಯಲ್ಲಿರುವ ಸರ್ಕಾರಿ ಆಸ್ಪತ್ರೆಯನ್ನು ದುರಸ್ತಿಗೊಳಿಸುವುದು

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ಪ್ರವಾಸಿಗಳ ಆಗರ ಆಗಿರುವ ಉಡುಪಿಯಲ್ಲಿ ಇರುವ ಸರಕಾರಿ ಆಸ್ಪತ್ರೆ ಈಗ ಸಮಸ್ಯೆಗಳ ಆಗರವಾಗಿದೆ. ಉಡುಪಿ ಶ್ರೀ ಕೃಷ್ಣನಿಗೆ ಕ್ಷೀರಾಭಿಷೇಕವಾದರೆ ಉಡುಪಿ ಆಸ್ಪತ್ರೆಯ ಅಡುಗೆ ಕೋಣೆಯಲ್ಲಿ ಮತ್ತೆ ವಿವಿಧ ವಾರ್ಡ್‌ಗಳಲ್ಲಿ ಹಂಚು ಒಡೆದು ಮಳೆ ನೀರಿನ ಅಭಿಷೇಕವಾಗುತ್ತಿದೆ. ಮಳೆಗಳ ವಾರ್ಡಿನ ಹಿಂದೆ ದೊಡ್ಡ ಕಂದಕ ಇದನ್ನು ಮುಚ್ಚದಿದ್ದರೆ ಸಾರ್ವಜನಿಕರಿಗೆ ಕಂಟಕ. ಆಸ್ಪತ್ರೆ ವಾರ್ಡಿನಲ್ಲಿ ಮಳೆಗಳ ವಾರ್ಡಿನಲ್ಲಿ ಹೆರಿಗೆ ವಾರ್ಡಿನಲ್ಲಿ ಅಡುಗೆ ಕೋಣೆಯಲ್ಲಿ ಎಲ್ಲೆರೇ ರೂಮ್‌ಗಳಲ್ಲಿ ಹಳೆ ಪಯರಿಂಗ್ ಬದಲಾಯಿಸಬೇಕು. ಖಾಯಿಲೆ ಶಾಕ್ ಜೊತೆಗೆ ವಿದ್ಯುತ್ ಶಾಕ್‌ನ್ನು ತಪ್ಪಿಸಬೇಕು. ಹೆರಿಗೆ ವಾರ್ಡಿನಲ್ಲಿ ಶೌಚಗೃಹ ರಿಪೇರಿ ಆಗಬೇಕು. ಹೆರಿಗೆ ವಾರ್ಡಿನ ಬಾಣಿಯಲ್ಲಿ ತುಂಬಿರುವ ಕಸಕಡ್ಡಿಗಳನ್ನು ತೆಗೆಸಬೇಕು. ಅಡುಗೆ ಕೋಣೆಯ ಹೊಗೆ ಚಿಮಣಿ ಬದಲಾಯಿಸಬೇಕು. ಟಿ. ಬಿ. ವಾರ್ಡಿನ ಬಾಗಿಲುಗಳು ಮುರಿದಿದ್ದು ಅದನ್ನು ರಿಪೇರಿ ಮಾಡಿಸಬೇಕು. ಮಳೆಗಳ ವಾರ್ಡು ಹೆರಿಗೆ ವಾರ್ಡು ಹಾಗೂ ವೈದ್ಯಾಧಿಕಾರಿಗಳ ನಿವಾಸಗಳಲ್ಲಿ ನೀರಿನ ಪೈಪ್ ದುರಸ್ತಿ ಟಾಂಕು ರಿಪೇರಿ ಆಗಬೇಕು, ರೋಗಿಗಳ ಕಾರಿತು ಈ ಸಮಸ್ಯೆ ಆದರೆ ಗಂಡಾಂತರ ಪ್ರಸಂಗಗಳಲ್ಲಿ ಅತಿ ಅಪಶ್ಯಕವಾಗಿ ಬೇಕಾಗಿರುವ ಅಂಬುಲೆನ್ಸ್ ಇಲ್ಲದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ. ಶವಾಗಾರದಲ್ಲಿ ವಿದ್ಯುತ್ ಸರಬರಾಜು ಇಲ್ಲದೆ ಸತ್ತವರೂ ಕತ್ತಲಲ್ಲಿ ಕೊಳೆಯಬೇಕಾಗಿದೆ. ಈ ಎಲ್ಲಾ ಸಮಸ್ಯೆಗಳ ನಿವಾರಣೆಗೆ ಸರ್ಕಾರದವರು ಬೆಳಕು ಚೆಲ್ಲುತ್ತೀರಾ ?

ಶ್ರೀ ಬಿ. ರಾಚಯ್ಯ (ಮಾನ್ಯ ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಸರ್ಕಾರಿ ಆಸ್ಪತ್ರೆಗೆ ದುರಸ್ತಿ ಆಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆಸ್ಪತ್ರೆ ಕಟ್ಟಡಗಳ ವಾರ್ಷಿಕ ಉಸ್ತುವಾರಿ ಹಾಗೂ ದುರಸ್ತಿ ಕಾರ್ಯಕ್ಕಾಗಿ ಪ್ರತಿ ವರ್ಷ ಆಯವ್ಯಯ ಅಂದಾಜು ಪಟ್ಟಿಯಲ್ಲಿ ಹಣವನ್ನು ಒದಗಿಸಲಾಗುತ್ತಿದೆ. ಯೋಜನಾ ವೆಚ್ಚದ ಮಿತಿಯಿಂದಾಗಿ ಸಾಕಷ್ಟು ಹಣವನ್ನು ಒದಗಿಸಲು ಸಾಧ್ಯವಾಗದೇ ಕೆಲವೊಂದು ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗಿಲ್ಲ. ಆದರೆ ರೋಗಿಗಳಿಗೆ ತೊಂದರೆಯಾಗದಂತೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆಗಬೇಕಾಗಿರುವ ದುರಸ್ತಿ ಕಾರ್ಯಗಳ ಅಗತ್ಯವಾರುಗೆ ಹಣವನ್ನು ಒದಗಿಸಿ ಕ್ರಮವನ್ನು ಕೈಗೊಳ್ಳಲಾಗುವುದು.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.